'ದ ಟಿನ್ ಡ್ರಮ್', 'ಡಾಗ್ ಇಯರ್ಸ್', 'ಕ್ಯಾಟ್ ಅಂಡ್ ಮೌಸ್', 'ದ ಪ್ಲೆಬಿಯನ್ಸ್', 'ದ ಪ್ಲೆಬಿಯನ್ ರಿಹರ್ಸ್ ದ ಅಪ್‌ರೈಸಿಂಗ್', 'ಫ್ರಮ್ ದ ಡೈರಿ ಆಫ್ ಎ ಸ್ನೇಲ್', 'ಲೋಕಲ್ ಅನೆಸ್ಥೆಟಿಕ್', 'ಕ್ರ್ಯಾಬ್ ವಾಕ್', 'ದ ರ್‍ಯಾಟ್' ಹಾಗೂ ಮೂರು ಕವನ ಸಂಕಲನಗಳು ಗುಂಥರ್ ಗ್ರಾಸ್‌ನ ಪ್ರಮುಖ ಪುಸ್ತಕಗಳಾಗಿವೆ. ಗ್ರಾಸ್‌ಗೆ 1999ರಲ್ಲಿ ನೊಬೆಲ್ ಪುರಸ್ಕಾರ ಬಂತು. ಈ ಮಾತುಕತೆ ಅದಕ್ಕಿಂತ ಮೊದಲಿನದು. ಈ ಸಂದರ್ಶನವನ್ನು ಮಾಡಿದ್ದು ಗುಂಥರ್ ಗ್ರಾಸ್‌ನ ಗೆಳೆಯ ಎಡ್‌ಸ್ಟ್ರೈಫ್.

◆ ನೀವು ಹೇಗೆ ಲೇಖಕರಾದಿರಿ?

ಇದರ ಬೀಜ ನಾನು ಬೆಳೆದ ಸಾಮಾಜಿಕ ಪರಿಸ್ಥಿತಿಯಲ್ಲಿದೆ. ನಮ್ಮದು ಮಧ್ಯಮ ವರ್ಗದ ಕುಟುಂಬ. ಎರಡು ಕೋಣೆಗಳ ಮನೆ. ಎರಡು ಕಿಟಕಿಗಳ ನಡುವೆ ಇರುವ ಜಾಗವೇ ನನ್ನ ಪುಸ್ತಕ ಮತ್ತು ಇತರೇ ವಸ್ತುಗಳನ್ನು ಇರಿಸುವ ಜಾಗ. ಹಲವು ಸಂಗತಿಗಳನ್ನು ನಾನು ಬೇಗ ಕಲಿತೆ. ಉದಾ – ಗದ್ದಲದಲ್ಲೂ ಬರೆಯುವುದು, ಓದುವುದು. ಹೀಗಾಗಿ ಬೇಗ ಬರವಣಿಗೆ ಶುರುವಾಯಿತು. ನಾನೀಗ ನಾಲ್ಕು ಕಡೆಗಳಲ್ಲಿ ಅಧ್ಯಯನದ ಕೋಣೆಯನ್ನು ಮಾಡಿಕೊಂಡಿದ್ದೇನೆ. ಆದರೂ ನನಗೆ ಬಾಲ್ಯದ ಪರಿಸ್ಥಿತಿ ಮತ್ತೆ ಮರುಕಳಿಸಬಹುದು ಎಂಬ ಭೀತಿ ಇದೆ. ಬಾಲ್ಯದಲ್ಲಿ ನಾನು ಸಾಕಷ್ಟು ಸುಳ್ಳು ಹೇಳುತ್ತಿದ್ದೆ. ಅದು ಅಮ್ಮನಿಗೂ ಇಷ್ಟವಾಗುತ್ತಿತ್ತು. ನಾನು ಸುಳ್ಳು ಕಥೆಗಳನ್ನು ಬರೆಯಲಾರಂಭಿಸಿದೆ. ಇಂದಿಗೂ ನಾನದನ್ನೇ ಮಾಡುತ್ತೇನೆ. ನಾನು ಹತ್ತು ವರ್ಷದವನಿದ್ದಾಗ ಕಾದಂಬರಿ ಬರೆಯಲು ಶುರು ಮಾಡಿದೆ. ಈ ಕಾಶುಬಿಯನ್ ಪಾತ್ರಗಳ ಇದೇ ಕಥೆ ಮುಂದೆ 'ದ ಟಿನ್ ಡ್ರಮ್' ಎಂಬ ಕಾದಂಬರಿಯಾಗಿ ರೂಪಗೊಂಡಿತು. ಅಲ್ಲಿಯ ಆಸ್ಕರ್‌ನ ಅಜ್ಜಿ ಎಂದರೆ ನನ್ನ ಅಜ್ಜಿಯೇ. ಮೊದಲ ಕಾದಂಬರಿಯಲ್ಲೇ ನಾನೊಂದು ತಪ್ಪು ಮಾಡಿದೆ. ಈ ಕಾದಂಬರಿಯ ಮೊದಲ ಅಧ್ಯಾಯದ ಕೊನೆಗೆ ಎಲ್ಲ ಪಾತ್ರಗಳು ಸಾಯುತ್ತವೆ. ಲೇಖನ ಕಲೆಯ ಮೊದಲ ಪಾಠ ನಾನಿಲ್ಲೇ ಕಲಿತೆ. ಲೇಖಕನು ತನ್ನ ಪಾತ್ರಗಳ ಬಗೆಗೆ ತುಂಬ ಎಚ್ಚರಿಕೆ ವಹಿಸಬೇಕಾಗುತ್ತದೆ.

◆ ಮೊದಲ ಆ ಯಶಸ್ವಿ ಕಾದಂಬರಿಯ ಬಳಿಕ ನಿಮ್ಮ ಮುಂದಿನ ಪ್ರಯತ್ನ ಏನಾಗಿತ್ತು?

ನನ್ನ ಪುಸ್ತಕವು ಕವಿತೆ ಮತ್ತು ರೇಖಾಚಿತ್ರದಿಂದ ಕೂಡಿದೆ. ಕೆಲವು ಸಲ ಪ್ರತಿಮೆಯಿಂದ ದೂರ ಪದಗಳ ಕಡೆಗೆ ಅಥವಾ ಪದಗಳಿಂದ ದೂರ ಪ್ರತಿಮೆಗಳತ್ತ ಹೋಗುವ ಪ್ರತಿಕ್ರಿಯೆಯಾಗುತ್ತಿತ್ತು. ನಾನು ಇಪ್ಪತ್ತು ವರ್ಷದವನಾದಾಗ ಟೈಪ್‌ರೈಟರ್ ಖರೀದಿಸಿದೆ. 'ದ ಟಿನ್ ಡ್ರಮ್'ನ ಮೊದಲ ಕರಡು ಈ ಟೈಪ್‌ರೈಟರ್ ಮೇಲೆ ಸಿದ್ಧಪಡಿಸಿದ್ದೆ. ನಾನೀಗ ಮುದುಕನಾಗುತ್ತಲಿದ್ದೇನೆ. ನನ್ನ ಗೆಳೆಯರು ಕಂಪ್ಯೂಟರ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಆದರೆ, ನನಗೆ ಮಾತ್ರ ಕೈಯಿಂದ ಬರೆಯುವುದೇ ಇಷ್ಟ. 'ದ ರ್‍ಯಾಟ್'ನ ಮೊದಲ ಕರಡು ಇದೇ ಕಾಗದದ ಮೇಲೆ ಬರೆದೆ. ಎರಡು ಮತ್ತು ಮೂರನೇ ಕರಡನ್ನು ಟೈಪ್‌ರೈಟರ್ ಮೇಲೆ ಸಿದ್ಧಪಡಿಸುತ್ತೇನೆ. ನಾಲ್ಕನೆಯದೂ ಸಹ ತಿದ್ದುಪಡಿಯ ಕರಡಾಗಿರುತ್ತದೆ.

◆ ನಿಮ್ಮ ಬರವಣಿಗೆಯ ಪದ್ಧತಿ ಹೇಗಿರುತ್ತದೆ?

ಮೊದಲ ಕರಡು ಸಿದ್ಧಪಡಿಸುವಾಗ ಐದರಿಂದ ಏಳು ಪುಟಗಳವರೆಗೆ ಬರೆಯುತ್ತೇನೆ. ಮೂರನೇ ಕರಡಿನ ಕಾಲಕ್ಕದು ಮೂರು ಪುಟಕ್ಕೆ ಇಳಿಯುತ್ತದೆ. ಈ ಪ್ರಕ್ರಿಯೆ ಹೀಗೆ ಮೆಲ್ಲಗೆ ಸಾಗುತ್ತದೆ. ನನಗೆ ಬರೆಯಲು ಬೆಳಗಿನ ಸೂರ್ಯ ಬೇಕಾಗುತ್ತಾನೆ. ನಾನೆಂದೂ ರಾತ್ರಿ ಬರೆಯುವುದಿಲ್ಲ. ಬೆಳಗ್ಗೆ ನಾನು ಒಂಬತ್ತರಿಂದ ಹತ್ತರವರೆಗೆ ಸಂಗೀತ ಆಲಿಸುತ್ತ ಓದುತ್ತಿರುತ್ತೇನೆ. ಬಳಿಕ ತಿಂಡಿ ಮುಗಿಸಿ ಕೆಲಸ ಶುರು